ಸಾಕ್ಷಿ ಯನ್ನು ದಿಃ 19.08.2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

1. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಸಹಿ ಮಾತ್ರ ಮಾಡುತ್ತೇನೆ.
2. ಈ ದಾವೆಗೆ ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಡಿಮ್ಯಾಂಡ್, ಮನೆಪತ್ರ ಹಾಗೂ ಮಂಜೂರಾತಿ ಪತ್ರ ನೀಡಿರುತ್ತೇನೆ.
3. ಈ ದಾವೆ ಹಾಕಲು ನಾನೇ ಮಾಹಿತಿ ನೀಡಿರುತ್ತೇನೆ. ವಾದಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತು.
4. ಈ ದಾವೆಯನ್ನು ಕರಿಯಪ್ಪ, ಮಂಜು ಹಾಗೂ ಮಂಜುಳಾ ರವರ ಮೇಲೆ ಹಾಕಿರುತ್ತೇನೆ.
5. ಪ್ರತಿವಾದಿಗಳು 2020 ರಲ್ಲಿ ಬಂದು ಗಲಾಟೆ ಮಾಡಿರುತ್ತಾರೆ.
6. ನನ್ನ ತಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆ ಊರು ಕೆಲ್ಲೂರು.
7. ನನ್ನ ತಂದೆ ಊರಿಗೆ ಹಾಗೂ ಮರೂರಿಗೆ 50 ಕಿ.ಮೀ ದೂರ ಇದೆ. ಕೊಪ್ಪದಿಂದ ಮರೂರಿಗೆ 5 ಕಿ.ಮೀ ಅಂತರ ಇದೆ.
8. ಕೊಪ್ಪ ಗ್ರಾಮದಿಂದ ದೊಡ್ಡಹೊಸೂರು ಗ್ರಾಮಕ್ಕೆ 3 ಕಿ.ಮೀ ಅಂತರ ಇದೆ.
9. ದೊಡ್ಡ ಹೊಸೂರಿನಿಂದ ಮರೂರಿಗೆ 2 ಕಿ.ಮೀ ಅಂತರ ಇದೆ.
10. ನಮಗೆ ಸರ್ಕಾರದಿಂದ ಮಂಜೂರಾಗಿರುವ ದಾವಾ ಮನೆಗೆ ಪ್ರತಿವಾದಿಗಳು ತೊಂದರೆ ಕೊಟ್ಟಿದ್ದರಿಂದ ಈ ದಾವೆ ಹಾಕಿರುತ್ತೇನೆ.
11. ನನ್ನ ಮಾವ ಮರಣ ಹೊಂದಿರುತ್ತಾರೆ. ಅವರು 2004 ರ ನಂತರ ಮರಣ ಹೊಂದಿರುತ್ತಾರೆ. ದಿನಾಂಕ ನೆನಪಿಲ್ಲ.
12. ನನ್ನ ಮಾವ ಜೀವಿತಕಾಲದಲ್ಲಿ ಗಳಗನಕೆರೆ ಗ್ರಾಮದಲ್ಲಿ ವಾಸವಿದ್ದರು.
13. ಈ ದಾವೆಗೆ ಸಂಬಂಧಪಟ್ಟಂತೆ ನನ್ನ ಮಾವನ ಹೆಸರಿನಲ್ಲಿರುವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.
14. ನಮ್ಮ ಮಾವನವರಿಗೆ ಕರಿಯಪ್ಪ ನವರು ಬರೆದುಕೊಟ್ಟ ಪತ್ರವನ್ನು ಹಾಜರುಪಡಿಸಿರುತ್ತೇನೆ.

15. ದಾವಾ ಆಸ್ತಿ ನಿಮ್ಮ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ, ಪಂಚಾಯತಿ ಕೊಟ್ಟಿದ್ದ ದಾಖಲೆ ಹಾಜರು ಮಾಡಿದ್ದೇನೆ.
16. ನೀವು ಹಾಜರುಪಡಿಸಿರುವ ದಾಖಲೆಗಳನ್ನು ದಾವಾ ಆಸ್ತಿ ಸ್ವಯಾರ್ಜಿತ ಆಸ್ತಿ ಎಂದು ಎಲ್ಲೂ ನಮೂದು ಇಲ್ಲ ಎಂದರೆ, ಸರಿಯಲ್ಲ.
17. ದಾವಾ ಸ್ವತ್ತಿನ ಮೂಲಕ ಮಾಲೀಕರು ಯಾರು ಎಂದರೆ, ಕರಿಯಪ್ಪನವರು ನನ್ನ ಮಾವನವರಿಗೆ ಬರೆದುಕೊಟ್ಟಿರುತ್ತಾರೆ.
18. ನಿಪಿ - 1 ಡಿಮ್ಯಾಂಡ್ ರಜಿಸ್ಟರ್ ಪತ್ರ ಅಲ್ಲ ಎಂದರೆ ಸರಿಯಲ್ಲ.
19. ನಿಪಿ - 2 ಯಾವ ಊರಿನ ಸ್ವತ್ತಿಗೆ ಸಂಬಂಧಪಟ್ಟಿದ್ದು ಎಂದರೆ, ಮರೂರಿನ ಮನೆಗೆ ಸಂಬಂಧಿಸಿದ್ದು.
20. ನಿಪಿ 3 ರಿಂದ 5ರ ದಾಖಲೆಗಳನ್ನು ನಿಮ್ಮ ಹೆಸರಾಗಲಿ, ಊರಿನ ಹೆಸರಾಗಲೀ ನಮೂದು ಇಲ್ಲ ಎಂದರೆ ಸರಿಯಲ್ಲ.
21. ನಿಪಿ - 1 ರಿಂದ 9, 11, 12 ಹಾಗೂ 14 ರಿಂದ 19 ರಲ್ಲಿ ನಿಮ್ಮ ಹೆಸರು ನಮೂದಗಿಲ್ಲ, ಸದರಿ ದಾಖಲೆಗಳನ್ನು ಈ ದಾವೆಗಾಗಿ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ